# ಕ್ರಿಕೆಟ್ ಆಡಳಿತಕ್ಕೆ ನೂಯಿ

ಇಂದ್ರಾ ನೂಯಿ ಅವರ ಹೆಸರು ಗೊತ್ತಿಲ್ಲದ ಭಾರತೀಯರು ವಿರಳ. ಚೆನ್ನೈಯಲ್ಲಿ ಹುಟ್ಟಿ ಕೋಲ್ಕತ್ತಾದ ಐಐಎಂನಲ್ಲಿ ಪದವಿ ಪಡೆದು ಅಮೆರಿಕದಲ್ಲಿ ಪೆಪ್ಸಿಕೋ ಕಂಪೆನಿಯ ಚೇರ್‌ಮನ್ ಮತ್ತು ಸಿಇಒ ಆಗಿ ಜಗತ್ತಿನಾದ್ಯಂತ ಖ್ಯಾತಿ ಹೊಂದಿರುವ ಮಹಿಳೆ. ಇದೀಗ ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ (ಐಸಿಸಿ)ನ ಮೊಟ್ಟಮೊದಲ ಸ್ವತಂತ್ರ ನಿರ್ದೇಶಕಿಯಾಗಿಯೂ ಇಂದ್ರಾ ನೂಯಿ ನೇಮಕಗೊಂಡಿದ್ದಾರೆ.

ಐಸಿಸಿ ಆಡಳಿತವನ್ನು ಅಮೂಲಾಗ್ರ ಬದಲಾವಣೆ ಮಾಡಿ, ಹೆಚ್ಚು ಸ್ವತಂತ್ರ ಮತ್ತು ವಿಶ್ವಾಸಾರ್ಹ ಸಂಸ್ಥೆಯನ್ನಾಗಿಸಬೇಕೆಂದು ಕಳೆದ ವರ್ಷ ನಿರ್ಣಯ ಕೈಗೊಳ್ಳಲಾಗಿತ್ತು. ಅದರಂತೆ 12 ನಿರ್ದೇಶಕರಿದ್ದ ಮಂಡಳಿಯನ್ನು 17 ನಿರ್ದೇಶಕರ ಮಂಡಳಿಯನ್ನಾಗಿ ಮಾಡಬೇಕೆಂದೂ ನಿರ್ಧರಿಸಲಾಗಿತ್ತು. ಕ್ರಿಕೆಟ್ ಆಡುವ ದೇಶಗಳ (ಆಫ್ಘಾನಿಸ್ತಾನ ಮತ್ತು ಐರ್ಲಂಡ್ ಸೇರಿ) 12 ಪೂರ್ಣಪ್ರಮಾಣದ ನಿರ್ದೇಶಕರು, ಮೂವರು ಸಹ ನಿರ್ದೇಶಕರು, ಒಬ್ಬ ಚೇರ್‌ಮನ್ ಮತ್ತು ಒಬ್ಬ ಸ್ವತಂತ್ರ ನಿರ್ದೇಶಕರು. ಇದರಲ್ಲಿ ಸ್ವತಂತ್ರ ನಿರ್ದೇಶಕರ ಹುದ್ದೆ ಮಹಿಳೆಯರಿಗೇ ಮೀಸಲು. ಈ ಮೀಸಲು ಹುದ್ದೆಗೆ ಆರು ತಿಂಗಳಿಂದ ಹುಡುಕಾಟ, ಚರ್ಚೆ ನಡೆಸಿ ಈಗ ಇಂದ್ರಾ ನೂಯಿಯವರನ್ನು ಆಯ್ಕೆ ಮಾಡಲಾಗಿದೆ. ಮುಂದಿನ ಎರಡು ವರ್ಷಗಳ ಅವಧಿಗೆ ಈ ಅಧಿಕಾರ. ಮಂಡಳಿ ಬಯಸಿದರೆ ಇನ್ನೂ ಎರಡು ಅವಧಿಗೆ ಈ ನಿರ್ದೇಶಕಿಯನ್ನು ಮುಂದುವರಿಸಬಹುದು. ಐಸಿಸಿಯಲ್ಲಿ ಈ ಹಿಂದೆ ಮಹಿಳಾ ನಿರ್ದೇಶಕಿಯರು ಇದ್ದರಾದರೂ, ಇತ್ತೀಚಿನ ನಾಲ್ಕು ವರ್ಷಗಳಿಂದ ಯಾರೂ ನಿರ್ದೇಶಕಿಯರಾಗಿರಲಿಲ್ಲ.

'ಐ ಲವ್ ಕ್ರಿಕೆಟ್. ಚೆನ್ನೈನಲ್ಲಿ ಹೈಸ್ಕೂಲ್ ಮತ್ತು ಕ್ರಿಶ್ಚಿಯನ್ ಕಾಲೇಜಿನಲ್ಲಿ ಕಲಿಯುತ್ತಿದ್ದಾಗ ನಾನೂ ಕ್ರಿಕೆಟ್ ಆಡುತ್ತಿದ್ದೆ. ಈಗ ಅಂತರರಾಷ್ಟ್ರೀಯ ಮಟ್ಟದ ಕ್ರಿಕೆಟಿಗರು ಮತ್ತು ಖ್ಯಾತನಾಮ ಆಡಳಿತಗಾರರ ಜತೆಗೆ ಐಸಿಸಿ ಮಂಡಳಿಯಲ್ಲಿ ಕೆಲಸ ಮಾಡುವ ಅವಕಾಶ ಸಿಕ್ಕಿದೆಯೆಂದರೆ ನಿಜಕ್ಕೂ ಥ್ರಿಲ್ ಆಗುತ್ತದೆ' ಎಂದಿದ್ದಾರೆ ನೂಯಿ. 'ನಾನು ಕ್ರಿಕೆಟ್ ಆಡುವಾಗಲೇ ಟೀಂವರ್ಕ್ ಮತ್ತು ಆರೋಗ್ಯಕರ ಸ್ಪರ್ಧೆಯ ಮನೋಭಾವವನ್ನು ರೂಢಿಸಿಕೊಂಡಿದ್ದು' ಎನ್ನುವುದೂ ಅವರ ಅಭಿಮತ. ಮುಂದಿನ ಜೂನ್‌ನಲ್ಲಿ ಐಸಿಸಿ ಮಂಡಳಿಗೆ ಸೇರಲಿರುವ ನೂಯಿ, ಐಸಿಸಿ ಚೇರ್‌ಮನ್ ಆಗಿರುವ ಭಾರತದ ಶಶಾಂಕ್ ಮನೋಹರ್ ಅವರ ಜತೆಗೂಡಿ ಐಸಿಸಿ ಆಡಳಿತವನ್ನು ಇನ್ನಷ್ಟು ಪಾರದರ್ಶಕಗೊಳಿಸಲು ಯತ್ನಿಸಬಹುದು.

ನೂಯಿ ನಡೆದು ಬಂದು ಹಾದಿ ನಿಜಕ್ಕೂ ರೋಚಕ. ಐಐಎಂ ಕೋಲ್ಕತ್ತಾದಿಂದ ಪದವಿ ಪಡೆದು ಯೇಲ್ ಯೂನಿವರ್ಸಿಟಿಯಲ್ಲಿ ಎಂಎಸ್ ಮಾಡಿದ ನೂಯಿ, ಆರಂಭದಲ್ಲಿ ಭಾರತದಲ್ಲೇ ಜಾನ್ಸನ್ ಅಂಡ್ ಜಾನ್ಸನ್ ಮಾರುಕಟ್ಟೆ ವಿಭಾಗದಲ್ಲಿ ಅನುಭವ ಪಡೆದರು. ಅಲ್ಲಿಂದ ಟೆಕ್ಸ್‌ಟೈಲ್ ಉದ್ಯಮವೊಂದನ್ನು ಸೇರಿದರು. ಇಲ್ಲಿನ ಅನುಭವ ಜಾಗತಿಕ ಮಟ್ಟಕ್ಕೆ ಕರೆದೊಯ್ದಿತು. ಜೂರಿಕ್ ಮೂಲದ ಏಷೀ ಬ್ರೌನ್ ಬೊವೆರಿಯಲ್ಲಿ ಅನುಭವ, ಬಳಿಕ ಮೋಟೊರೋಲ ಕಂಪೆನಿಯಲ್ಲಿ ಉನ್ನತ ಹುದ್ದೆ. ಈ ಕಂಪೆನಿಗಳಲ್ಲಿ ನಡೆಸಿದ ಪ್ರಯೋಗ ಮತ್ತು ಏರಿಸಿದ ಆದಾಯ ಗಳಿಕೆಯಿಂದಾಗಿ ಪೆಪ್ಸಿಕೋ ಕಂಪೆನಿ ಸೇರಲು ಸುಲಭವಾಯಿತು. ಆರಂಭದಲ್ಲಿ ಪೆಪ್ಸಿಕೋದ ಚೀಫ್ ಫೈನಾನ್ಸ್ ಆಫೀಸರ್ ಆಗಿ ಉಪಾಧ್ಯಕ್ಷ ಮಟ್ಟದ ಹುದ್ದೆಯಲ್ಲಿದ್ದ ನೂಯಿ, ಕೆಲವೇ ವರ್ಷಗಳಲ್ಲಿ ಅಧ್ಯಕ್ಷ ಹುದ್ದೆಗೇರಿದರು. ಈಗ ಕಂಪೆನಿಗೆ ಅವರೇ ಸಿಇಒ ಮತ್ತು ಚೇರ್‌ಮನ್.

ಕೇವಲ ಒಂದು ತಂಪು ಪಾನೀಯಕ್ಕೆ ಸೀಮಿತವಾಗಿದ್ದ ಕಂಪೆನಿಯನ್ನು ಬುದ್ಧಿವಂತಿಕೆಯಿಂದ ವಿಸ್ತರಿಸಿದ್ದು ನೂಯಿ ಅವರ ಯಶಸ್ಸಿನ ಒಳಗುಟ್ಟು. ಆಕರ್ಷಕ ತಂಪು ಪಾನೀಯ, ಆರೋಗ್ಯಕ್ಕೆ ಪೂರಕ ಪಾನೀಯ ಮತ್ತು ಆರೋಗ್ಯಕ್ಕೆ ಅಗತ್ಯವಾದ ಪಾನೀಯ– ಎಂದು ಮೂರು ಭಾಗಗಳನ್ನಾಗಿ ಉತ್ಪನ್ನಗಳನ್ನು ವಿಂಗಡಿಸಿದ ನೂಯಿಯವರ ಮಾರುಕಟ್ಟೆ ತಂತ್ರಗಳು ಕಂಪೆನಿಯನ್ನು ಅತ್ಯಧಿಕ ಎತ್ತರಕ್ಕೆ ಒಯ್ದವು. ಇವತ್ತು ಪೆಪ್ಸಿಕೋ ಒಟ್ಟು 22 ಬ್ರ್ಯಾಂಡ್‌ಗಳನ್ನು ಹೊಂದಿದ್ದು ಜಗತ್ತಿನಲ್ಲೇ ಅತ್ಯಧಿಕ ನಿವ್ವಳ ಆದಾಯ ಗಳಿಸುವ ಎರಡನೇ ತಂಪುಪಾನೀಯ ಕಂಪೆನಿಯಾಗಿ ಬೆಳೆದಿದೆ. ಯಮಿ ಬ್ರ್ಯಾಂಡ್ ಅಂತೂ ಅತ್ಯಧಿಕ ಜನಪ್ರಿಯತೆ ತಂದುಕೊಟ್ಟಿದೆ. ಟ್ರೊಪಿಕಾನಾ ಕಂಪೆನಿಯ ಖರೀದಿ ಮತ್ತು ಕ್ವೇಕರ್ ವೋಟ್ಸ್ ಕಂಪೆನಿಯ ವಿಲೀನ ಮಾರುಕಟ್ಟೆಯಲ್ಲಿ ಬುದ್ಧಿವಂತಿಕೆಯ ಕ್ರಮ ಎನ್ನಿಸಿತು. 63 ಶತಕೋಟಿ ಡಾಲರ್ ವಾರ್ಷಿಕ ನಿವ್ವಳ ಆದಾಯದ ಈ ಕಂಪೆನಿಯನ್ನು ಕಳೆದ ಹತ್ತು ವರ್ಷಗಳಿಂದ ಹಂತ ಹಂತವಾಗಿ ಯಶಸ್ಸಿನತ್ತ ಮುನ್ನಡೆಸಿದ ಕೀರ್ತಿ ನೂಯಿ ಅವರದು. ಹಾಗೆಂದೇ 'ಫಾರ್ಚೂನ್ 500' ಕಂಪೆನಿಗಳ ಜಗತ್ತಿನ ಅತ್ಯಂತ ಪ್ರಭಾವಶಾಲಿ ವ್ಯಕ್ತಿಗಳ ಪಟ್ಟಿಯಲ್ಲಿ ಮೂರನೇ ಸ್ಥಾನಕ್ಕೆ ಏರಲು ಇಂದ್ರಾ ನೂಯಿ ಅವರಿಗೆ ಸಾಧ್ಯವಾಯಿತು. ಕಂಪೆನಿ ಷೇರುಗಳ ಸ್ವಾಮ್ಯತ್ವ ಅಲ್ಲದೆ ತಿಂಗಳಿಗೆ 29.8 ದಶಲಕ್ಷ ಡಾಲರ್ ಸಂಬಳ ಪಡೆಯುತ್ತಿರುವ ನೂಯಿ, ಇವತ್ತು ಉದ್ಯಮರಂಗದ 'ಯಶಸ್ವಿ ಭಾರತೀಯ ಮಹಿಳೆ'ಯರ ಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿದ್ದಾರೆ.

ಪೆಪ್ಸಿಕೋ ಮುಖ್ಯಸ್ಥೆಯಾಗಿ ಜಗತ್ತಿನಾದ್ಯಂತ ಓಡಾಡುತ್ತಿರುವ ನೂಯಿ, ಇದರ ಜತೆಗೇ ಶ್ಲಂಬರ್ಗರ್ ಲಿಮಿಟೆಡ್ ಕಂಪೆನಿ ನಿರ್ದೇಶಕಿಯಾಗಿ ಮತ್ತು ವಿಶ್ವ ಆರ್ಥಿಕ ವೇದಿಕೆಯ ಫೌಂಡೇಷನ್ ಮಂಡಳಿಯಲ್ಲೂ ಕೆಲಸ ಮಾಡುತ್ತಿದ್ದಾರೆ. 'ಐಸಿಸಿಯಲ್ಲಿ ಇವರಿಗೇನು ಕೆಲಸ?' ಎಂಬ ಪ್ರಶ್ನೆಗೆ ಶಶಾಂಕ್ ಮನೋಹರ್ 'ಆಡಳಿತದಲ್ಲಿ ಗುಣಮಟ್ಟ ಹೆಚ್ಚಳಕ್ಕೆ ಮತ್ತು ಐಸಿಸಿಯ ಮಾರುಕಟ್ಟೆ ವಿಸ್ತರಣೆಗೆ ಖಂಡಿತಾ ನೆರವಾಗುತ್ತದೆ' ಎಂದಿದ್ದಾರೆ. ಕ್ರಿಕೆಟ್‌ಗೂ ಪೆಪ್ಸಿ ಜಾಹೀರಾತಿಗೂ ಹಿಂದಿನಿಂದಲೂ ನಿಕಟ ಸಂಬಂಧವಿದೆ. ಈಗ ಪೆಪ್ಸಿ ಕಂಪೆನಿಯ ಮುಖ್ಯಸ್ಥೆಯೇ ಐಸಿಸಿ ಆಡಳಿತ ಮಂಡಳಿಯಲ್ಲಿ ಬಂದು ಕುಳಿತಿರುವುದರಿಂದ ಪೆಪ್ಸಿ ಮತ್ತು ಐಸಿಸಿ ಎರಡಕ್ಕೂ ಹೆಚ್ಚು ಲಾಭವಾಗಬಹುದು. ಆದರೆ ಕ್ರಿಕೆಟ್ ಪ್ರೇಕ್ಷಕರಿಗೆ ಏನು ಲಾಭವಾಗುತ್ತದೆ ಎನ್ನುವುದನ್ನು ಕಾದುನೋಡಬೇಕು. ■



Printed and Published by B.A. Ravi on behalf of The Printers (Mysore) Private Ltd. Printed at M/s Geetanjali Graphics, # B-71, New No. 84, KSSIDC, Indl Estate, 6th Block, Rajajinagar, Bengaluru- 560010 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 2588 0000, Fax: 25880618, Editorial:25880619,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65